# ‘ಕನಕ’ನ ಜೊತೆ ಸಂಪಿಗೆ!

ಆರ್. ಚಂದ್ರು ನಿರ್ದೇಶನದ ‘ಕನಕ’ ಚಿತ್ರದ ತಾರಾಗಣಕ್ಕೆ ಹೊಸಹೊಸ ಬಣ್ಣಗಳು ಸೇರ್ಪಡೆಯಾಗುತ್ತಲೇ ಇವೆ. ಈ ಬಣ್ಣಗಳಲ್ಲಿ ಎದ್ದುಕಾಣುವುದು ಮಾನ್ವಿತಾ ಹರೀಶ್ ಹಾಗೂ ರಚಿತಾ ರಾಮ್. ವಿಜಯ್‌ಗೆ ಜೋಡಿಯಾಗಿರುವ ಈ ಇಬ್ಬರು ಚೆಲುವೆಯರು ‘ಕನಕ’ನ ವರ್ಚಸ್ಸು ಹೆಚ್ಚಿಸಲಿದ್ದಾರೆ.

ಮಾನ್ವಿತಾ ಹರೀಶ್ ಅವರದು ಚಿತ್ರದಲ್ಲಿ ಕಾಲೇಜು ಹುಡುಗಿಯ ಪಾತ್ರ. ಗ್ಲಾಮರ್ ಜೊತೆಗೆ ಅಭಿನಯಕ್ಕೂ ಸಾಕಷ್ಟು ಅವಕಾಶ ಇರುವ ಪಾತ್ರವಂತೆ. ‘ಕನಕ’ ಚಿತ್ರದ ಮೂಲಕ ಮಾನ್ವಿತಾ ಇದೇ ಮೊದಲ ಬಾರಿಗೆ ಸೂರಿ ಕ್ಯಾಂಪ್‌ನಿಂದ ಹೊರಗೆ ಬಂದಿದ್ದಾರೆ. ‘ಕೆಂಡಸಂಪಿಗೆ’ ಅವರ ಅಭಿನಯದ ಮೊದಲ ಸಿನಿಮಾ. ‘ಟಗರು’ ಚಿತ್ರದಲ್ಲಿ ನಾಯಕಿಯಾಗುವ ಮೂಲಕ ಸೂರಿ ನಿರ್ದೇಶನದ ಎರಡನೇ ಸಿನಿಮಾದಲ್ಲಿ ಕಾಣಿಸಿಕೊಳ್ಳುವ ಅವಕಾಶ ಅವರದಾಗಿತ್ತು. ಈಗ ‘ಕನಕ’ನ ಮೂಲಕ ಮತ್ತೊಬ್ಬ ಖ್ಯಾತ ನಿರ್ದೇಶಕನ ಚಿತ್ರದಲ್ಲಿ ನಟಿಸುವ ಅವಕಾಶ.

‘ಕನಕ’ ಚಿತ್ರದಲ್ಲಿ ವಿಜಯ್ ಅವರದು ಆಟೋ ಚಾಲಕನ ಪಾತ್ರ. ಅವರ ಪಾತ್ರಕ್ಕೆ ರಾಜಕುಮಾರ್ ಅಭಿಮಾನಿಯ ಆಯಾಮವೂ ಇದೆ. ರಾಜಕುಮಾರ್ ವ್ಯಕ್ತಿತ್ವದ ಛಾಯೆಯ ಸಿನಿಮಾಗಳನ್ನು ರೂಪಿಸುವುದು ಇತ್ತೀಚಿನ ದಿನಗಳಲ್ಲಿ ಟ್ರೆಂಡ್ ಆಗಿ ಬೆಳೆಯುತ್ತಿದ್ದು, ಈ ಟ್ರೆಂಡ್ ಅನ್ನು ‘ಕನಕ’ ಯಶಸ್ವಿಯಾಗಿ ಮುಂದುವರಿಸುವ ನಿರೀಕ್ಷೆ ಚಿತ್ರತಂಡದ್ದು.

ರಚಿತಾ ರಾಮ್ ಇತ್ತೀಚೆಗಷ್ಟೇ ಚಿತ್ರತಂಡಕ್ಕೆ ಸೇರ್ಪಡೆಯಾಗಿದ್ದಾರೆ. ಅವರ ಪಾತ್ರದ ಚೌಕಟ್ಟು ಇನ್ನೂ ಬಹಿರಂಗಗೊಂಡಿಲ್ಲ. ಸತ್ಯ ಹೆಗಡೆ ಛಾಯಾಗ್ರಹಣ ಹಾಗೂ ನವೀನ್ ಸಂಗೀತ ಚಿತ್ರಕ್ಕಿದೆ.





## ಮಧ್ಯಮವರ್ಗದ ‘ಸಿಟಿ’

ಮುರಳಿ ಗುರಪ್ಪ ನಿರ್ದೇಶನದ ‘ಸಿಲಿಕಾನ್ ಸಿಟಿ’ ಸಿನಿಮಾ ಚಿತ್ರಮಂದಿರಗಳ ಹೊಸ್ತಿಲಲ್ಲಿದೆ. ತಮಿಳಿನ ‘ಮೆಟ್ರೊ’ ಚಿತ್ರದ ಪ್ರೇರಣೆಯಿಂದ ರೂಪುಗೊಂಡಿರುವ ಕನ್ನಡದ ‘ಸಿಲಿಕಾನ್ ಸಿಟಿ’ಯಲ್ಲಿ ಮೂಲ ಚಿತ್ರದಲ್ಲಿಲ್ಲದಅನೇಕ ಸಂಗತಿಗಳು ಇವೆಯಂತೆ. ‘ಮೆಟ್ರೊ’ ಸಿನಿಮಾದ ಒಂದು ಎಳೆಯನ್ನಷ್ಟೇ ಉಳಿಸಿದಕೊಂಡು ಕೌಟುಂಬಿಕ ಸಂಬಂಧಗಳ ಕಥನವನ್ನು ಹೆಣೆಯಲಾಗಿದೆಯಂತೆ. ಪ್ರೇಮದ ನವಿರುತನವನ್ನೂ ಒಳಗೊಂಡಿರುವ ಸಿನಿಮಾ ಮಧ್ಯಮವರ್ಗದ ಕುಟುಂಬಗಳಿಗೆ ಇಷ್ಟವಾಗುವಂತಿದೆ ಎನ್ನುವ ನಂಬಿಕೆ ಮುರಳಿ ಅವರದು.

ಶ್ರೀನಗರ ಕಿಟ್ಟಿ ಚಿತ್ರದ ನಾಯಕ. ನಗರದಲ್ಲಿ ಬದುಕುವ ಮಧ್ಯಮವರ್ಗದ ಜನರ ಕಥೆಯನ್ನು ಸಿನಿಮಾಕ್ಕೆ ಅಳವಡಿಸಿರುವುದು ಅವರಿಗೆ ಖುಷಿಕೊಟ್ಟಿದೆ. ಮಧ್ಯಮ ವರ್ಗದ ಯುವಕನೊಬ್ಬನ ತವಕ ತಲ್ಲಣಗಳನ್ನು ಪಾತ್ರದ ರೂಪದಲ್ಲಿ ಅನುಭವಿಸಿದ್ದು ಅವರ ಮಾತುಗಳಲ್ಲಿ ಸ್ಪಷ್ಟವಾಗುತ್ತಿತ್ತು. ಬಹು ದಿನಗಳ ನಂತರ ಭಿನ್ನವಾದ ಪಾತ್ರವೊಂದರಲ್ಲಿ ನಟಿಸಿದ ಖುಷಿಯನ್ನು ಹಂಚಿಕೊಂಡ ಅವರು, ಈ ಸಿನಿಮಾ ಪ್ರೇಕ್ಷಕರಿಗೆ ಇಷ್ಟವಾಗುವ ವಿಶ್ವಾಸ ವ್ಯಕ್ತಪಡಿಸಿದರು. ಕಾವ್ಯಾಶೆಟ್ಟಿ ಚಿತ್ರದ ನಾಯಕಿ.

ಯುವ ನಟ ಸೂರಜ್ ಗೌಡ ಚಿತ್ರದ ಪ್ರಮುಖ ಪಾತ್ರವೊಂದರಲ್ಲಿ ಕಾಣಿಸಿಕೊಂಡಿದ್ದಾರೆ. ಸೂರಜ್ಗೆ ಜೋಡಿಯಾಗಿ ಏಕ್ತಾ ರಾಥೋಡ್ ನಟಿಸಿದ್ದಾರೆ. ಚಿಕ್ಕಣ್ಣ, ತುಳಸಿ ಹಾಗೂ ಅಶೋಕ್ ತಾರಾಗಣದಲ್ಲಿರುವ ಪ್ರಮುಖರು. ಕರ್ನಾಟಕ ಮಾತ್ರವಲ್ಲದೆ, ಹೊರ ನಾಡುಗಳಲ್ಲೂ ‘ಸಿಲಿಕಾನ್ ಸಿಟಿ’ಯನ್ನು ತೆರೆ ಕಾಣಿಸಲು ಚಿತ್ರತಂಡ ಪ್ರಯತ್ನಿಸುತ್ತಿದೆ.